(ತಿದ್ದುಪಡಿ) ವಿಧೇಯಕ' ವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : "2013 ನೇ ಸಾಲಿನ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ (ತಿದ್ದುಪಡಿ) ವಿಧೇಯಕ" ವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕದ ಮಂಡನೆಗೆ ಅನುಮತಿ ನೀಡಲಾಯಿತು.

ಶ್ರೀ ಎಸ್.ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು): ಮಾನ್ಯ ಅಧ್ಯಕ್ಷರೆ, '2013 ನೇ ಸಾಲಿನ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ (ತಿದ್ದುಪಡಿ) ವಿಧೇಯಕ' ವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

(ಅನುಬಂಧ–7)

ಆ. ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

1. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ [ತಿದ್ದುಪಡಿ] ವಿಧೇಯಕ, 2013

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿ.ಟಿ.ರವಿ [ಮಾನ್ಯ ಉನ್ನತ ಶಿಕ್ಷಣ ಸಚಿವರು] : ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2013ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು : ವಿಧೇಯಕದ ಬಗ್ಗೆ ಸದನಕ್ಕೆ explain ಮಾಡಿ.

ಶ್ರೀ ಸಿ.ಟಿ.ರವಿ :– ಮಾನ್ಯ ಅಧ್ಯಕ್ಷರೆ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 677ಕ್ಕೂ ಹೆಚ್ಚು ಕಾಲೇಜುಗಳಿವೆ. ಇದು ರಾಜ್ಯದ ಅತ್ಯಂತ ದೊಡ್ಡ ವಿಶ್ವವಿದ್ಯಾಲಯವಾಗಿದೆ. ಹಾಗಾಗಿ ಇನ್ನೊಂದು ಹೊಸ ವಿಶ್ವವಿದ್ಯಾಲಯವನ್ನು ಸೃಜಿಸಬೇಕೆನ್ನುವ ಹಿನ್ನಲೆಯಲ್ಲಿ ಬೆಂಗಳೂರು [ಗ್ರಾಮಾಂತರ] ಜಿಲ್ಲೆ, ಕೋಲಾರ ಜಿಲ್ಲೆ, ಚಿಕ್ಕಬಳ್ಳಾಪುರ ಜಿಲ್ಲೆ ಮತ್ತು ಬೆಂಗಳೂರು [ಉತ್ತರ] ತಾಲ್ಲೂಕು ಮತ್ತು [ಪೂರ್ವ] ತಾಲ್ಲೂಕುಗಳ ಪ್ರದೇಶವನ್ನು ಒಳಗೊಂಡು ಹೊಸಕೋಟೆ ಬಳಿ 'ಜ್ಞಾನವಾಹಿನಿ' campus ಮಾಡಿ, ಅದಕ್ಕೆ 'DVG ಬೆಂಗಳೂರು ವಿಶ್ವವಿದ್ಯಾಲಯ' ಎನ್ನುವಂತಹ ಹೆಸರನ್ನಿಟ್ಟು ಹೊಸ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡತಕ್ಕಂಥ ಯೋಚನೆಯನ್ನು ಈ ಒಂದು ತಿದ್ದುಪಡಿ ಮಸೂದೆಯಲ್ಲಿ ಮಾಡಲಾಗಿದೆ. ತಾತ್ಕಾಲಿಕವಾಗಿ ಐದು ವರ್ಷಗಳ ಅವಧಿಗೆ ಸೆಂಟ್ರಲ್ ಕಾಲೇಜ್ ಆವರಣದಲ್ಲಿ ಇದರ ಕ್ಯಾಂಪಸ್ ಇರಬೇಕು, ಅದರ ನಂತರ ಮೂಲ ಸೌಕರ್ಯ ಅಭಿವೃದ್ಧಿ ಪಡಿಸಿಕೊಂಡು ಅದು ಹೊಸಕೋಟೆಗೆ ವರ್ಗಾವಣೆ ಆಗಬೇಕು ಎನ್ನುವಂತಹ ಮಸೂದೆ ಇದಾಗಿದೆ. ಈ ಮಸೂದೆ ಜಾರಿಯಾಗಿರುವುದರಿಂದ, ಬೆಂಗಳೂರಿನ ಮೂಲ ವಿಶ್ವವಿದ್ಯಾಲಯದಲ್ಲಿ 316 ಕಾಲೇಜುಗಳು ಉಳಿಯುತ್ತವೆ. DVG ಬೆಂಗಳೂರು ವಿಶ್ವವಿದ್ಯಾಲಯಕ್ಕೆ 367 ಕಾಲೇಜುಗಳು ಸೇರುತ್ತವೆ. ಈಗಿರುವ ಬೆಂಗಳೂರು ವಿಶ್ವವಿದ್ಯಾಲಯ ಹಾಲಿ ದೊಡ್ಡ ವಿಶ್ವವಿದ್ಯಾಲಯವಾಗಿರುವುದರಿಂದ ಇನ್ನೊಂದು ಹೊಸ ವಿಶ್ವವಿದ್ಯಾಲಯವನ್ನು create ಮಾಡುತ್ತಿದ್ದೇವೆ.

ಶ್ರೀ ಎನ್. ಸಂಪಂಗಿ :– ಈಗಿರುವ ಬೆಂಗಳೂರು ವಿಶ್ವವಿದ್ಯಾಲಯವನ್ನು bifurcate ಮಾಡಿ ಹೊಸಕೋಟೆ ಹತ್ತಿರ ಮಾಡುತ್ತೇವೆಂದು ಹೇಳುತ್ತಿದ್ದೀರಿ, ಪರವಾಗಿಲ್ಲ.

ಶ್ರೀ ಸಿ.ಟಿ.ರವಿ :– ಹೊಸದಾಗಿ ವಿಶ್ವವಿದ್ಯಾಲಯವನ್ನು create ಮಾಡುತ್ತಿದ್ದೇವೆ.

ಶ್ರೀ ಎನ್. ಸಂಪಂಗಿ :–ಆಯಿತು, ಹೊಸದಾಗಿ ವಿಶ್ವವಿದ್ಯಾಲಯವನ್ನು ಮಾಡುತ್ತಿದ್ದೀರಿ. ಆದರೆ ಹೊಸಕೋಟೆ ಬೆಂಗಳೂರಿಗೆ ಬಹಳ ಹತ್ತಿರವಾಗಿದೆ. ಈಗ ಕೋಲಾರದಿಂದಲೂ ಹೊಸಕೋಟೆಗೆ ಬರಬೇಕಾಗುತ್ತದೆ, ಚಿಕ್ಕಬಳ್ಳಾಪುರ, ಬಾಗೇಪಲ್ಲಿ ಆ ಕಡೆಯಿಂದಲೂ ಕೂಡ ಅಲ್ಲಿಗೆ ಬರಬೇಕಾಗುತ್ತದೆ. ಅದು ಪುನಃ 100 ಕಿ.ಮೀ. ದೂರವಾಗುತ್ತದೆ. ಆದ್ದರಿಂದ , ಸರ್ಕಾರ ಚಿಕ್ಕಬಳ್ಳಾಪುರದಲ್ಲೇ ವಿಶ್ವವಿದ್ಯಾಲಯವೊಂದನ್ನು ಮಾಡಬೇಕು. ಡಾ : ಹೆಚ್. ನರಸಿಂಹಯ್ಯನವರು Vice Challenceller ಆಗಿದ್ದವರು. ಅವರ ಹೆಸರಿನಲ್ಲಿ ಬೇಕಾದರೆ ಹೊಸದಾಗಿ

ವಿಶ್ವವಿದ್ಯಾಲಯವೊಂದನ್ನು ಮಾಡಿ. ಚಿಕ್ಕಬಳ್ಳಾಪುರದಲ್ಲೇ ಆ ವಿಶ್ವವಿದ್ಯಾಲಯವನ್ನು ಮಾಡಿದರೆ ಸೂಕ್ತವಾಗಿರುತ್ತದೆ. ಹೊಸಕೋಟೆ ಬೆಂಗಳೂರು ನಗರಕ್ಕೆ ಮತ್ತು ಬೆಂಗಳೂರು ಗ್ರಾಮಾಂತರಕ್ಕೆ ಸಮೀಪವಾಗುತ್ತದೆ. ಆದರೆ ನಾವು ಹೊಸಕೋಟೆಗೆ ಹೋಗಬೇಕೆಂದರೆ ಪುನಃ 100 ಕಿ.ಮೀ. ದೂರವಾಗುತ್ತದೆ. ಆದ್ದರಿಂದ, ದಯವಿಟ್ಟು ಚಿಕ್ಕಬಳ್ಳಾಪುರದಲ್ಲೇ ನೀವು ಹೊಸ ವಿಶ್ವವಿದ್ಯಾಲಯವೊಂದನ್ನು ಮಾಡಿ. ಅಲ್ಲಿ ಒಂದು ವಿಶ್ವವಿದ್ಯಾಲಯವೊಂದನ್ನು ಮಾಡಿದರೆ, ಕೋಲಾರದಿಂದ ಬರತಕ್ಕವರಿಗೆ, ಬಾಗೇಪಲ್ಲಿ ಮತ್ತು ಗೌರಿಬಿದನೂರಿನ ಗ್ರಾಮೀಣ ಪ್ರದೇಶಗಳಿಂದ ಬರತಕ್ಕವರಿಗೆ ಎಲ್ಲರಿಗೂ ಅನುಕೂಲವಾಗುತ್ತದೆ. ಬೆಂಗಳೂರಿನಲ್ಲೇ ವಿಶ್ವವಿದ್ಯಾಲಯವೊಂದು ಇರುವುದರಿಂದ ನಗರಕ್ಕೆ ಅದು ಹೊಂದಿಕೊಂಡಿದೆ. ಅದಕ್ಕೆ ದಯವಿಟ್ಟು ಚಿಕ್ಕಬಳ್ಳಾಪುರದಲ್ಲಿ ನೀವು ಆ ಒಂದು ವಿಶ್ವವಿದ್ಯಾಲಯವನ್ನು ಮಾಡಿ ಎಂದು ನಾನು ತಮ್ಮ ಮೂಲಕ ಬೇಡಿಕೆ ಇಡುತ್ತಿದ್ದೇನೆ.

ಶ್ರೀ ಸಿ.ಟಿ.ರವಿ:– ಮಾನ್ಯ ಅಧ್ಯಕ್ಷರೆ, ಈ ವಿಧೇಯಕ ಈಗಾಗಲೇ ವಿಧಾನ ಪರಿಷತ್ತಿನಲ್ಲಿ ಅಂಗೀಕೃತವಾಗಿದೆ. ಸಾಕಷ್ಟು ಚರ್ಚೆಯ ನಂತರ ಅದು ಅಲ್ಲಿ ಅಂಗೀಕೃತವಾಗಿ, ಇಲ್ಲಿ ಆ ಅಂಗೀಕೃತ ರೂಪದಲ್ಲಿ ಪರ್ಯಾಲೋಚನೆಗೆ ಇಡಲಾಗಿದೆ. Knowledge Commission ಮುಂದಿನ ದಿನಗಳಲ್ಲಿ ಜಿಲ್ಲೆಗೊಂದು ವಿಶ್ವವಿದ್ಯಾಲಯ ಮಾಡಬೇಕೆಂದು ಸಲಹೆಯೊಂದನ್ನು ಕೊಟ್ಟಿದೆ. ಮುಂದಿನ ದಿನಗಳಲ್ಲಿ ಚಿಕ್ಕಬಳ್ಳಾಪುರಕ್ಕೊಂದು ವಿಶ್ವವಿದ್ಯಾಲಯ ಆಗಬಹುದು, ಕೋಲಾರಕ್ಕೂ ಒಂದು ವಿಶ್ವವಿದ್ಯಾಲಯ ಆಗಬಹುದು. ಈಗ ಈ ಬಗ್ಗೆ ಯೋಚನೆಯನ್ನು ಮಾಡುವುದಕ್ಕಾಗುವುದಿಲ್ಲ. ಬೆಂಗಳೂರು ಗ್ರಾಮಾಂತರದಲ್ಲಿ 26 ಕಾಲೇಜುಗಳಿವೆ, ಬೆಂಗಳೂರು ಅರ್ಬನ್‌ನಲ್ಲಿ 364 ಕಾಲೇಜ್‌ಗಳಿವೆ. ಬೆಂಗಳೂರು [ಉತ್ತರ] ಮತ್ತು [ಪೂರ್ವ] ತಾಲ್ಲೂಕುಗಳಲ್ಲೇ ಹೆಚ್ಚು ಕಾಲೇಜ್‌ಗಳು ಬರುತ್ತವೆ. ಇದನ್ನೆಲ್ಲವನ್ನೂ ಆಧರಿಸಿ ಇದನ್ನು ತಂದಿದ್ದೇವೆ ಕೋಲಾರದಲ್ಲಿ 46 ಕಾಲೇಜ್‌ಗಳಿವೆ ಮತ್ತು ಚಿಕ್ಕಬಳ್ಳಾಪುರದಲ್ಲಿ 31 ಕಾಲೇಜ್‌ಗಳಿವೆ. ಹೆಚ್ಚು ಕಾಲೇಜ್‌ಗಳು ಬರುವುದು ಉತ್ತರ ತಾಲ್ಲೂಕು ಮತ್ತು ಪೂರ್ವ ತಾಲ್ಲೂಕು ಒಳಗೊಂಡಿರತಕ್ಕ ಪ್ರದೇಶದಲ್ಲೇ. ಅವುಗಳೆಲ್ಲಾ ಹೊಸಕೋಟೆ peripheralನಲ್ಲೇ, ಅದರ ಬಾರ್ಡರ್‌ನಲ್ಲೇ ಬರುತ್ತವೆ. ಬೆಂಗಳೂರು [ಉತ್ತರ] ತಾಲ್ಲೂಕು ಬಾರ್ಡರ್‌ಗೆ ಬರುತ್ತದೆ, ಬೆಂಗಳೂರು [ಪೂರ್ವ] ತಾಲ್ಲೂಕು ಸಹ ಬಾರ್ಡರ್‌ಗೆ ಬರುತ್ತದೆ. N.R.Shetty ನೇತೃತ್ವದ ಸಮಿತಿಯ ಶಿಫಾರಸ್ಸು, ಅದರ ಮೇಲೆ Higher Education Council ನಲ್ಲಿ ಶಿಕ್ಷಣ ತಜ್ಞರ ಜೊತೆಯಲ್ಲಿ ಸಮಾಲೋಚನೆ ಮಾಡಿ, ಸಾಕಷ್ಟು ವಿವರವಾದ ಚರ್ಚೆ ನಡೆಸಿ, ಈ ಒಂದು

ಕ್ಯಾಂಪಸ್ ಪ್ರದೇಶವನ್ನು ಆಯ್ಕೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ನೀವು ಹೇಳುವ ರೀತಿಯಲ್ಲಿ ಚಿಕ್ಕಬಳ್ಳಾಪುರಕ್ಕೂ ವಿಶ್ವವಿದ್ಯಾಲಯ ಬರಬಹುದು, ಕೋಲಾರಕ್ಕೂ ವಿಶ್ವವಿದ್ಯಾಲಯ ಬರಬಹುದು. ಈಗ ಇಲ್ಲಿ ಹೊಸ ವಿಶ್ವವಿದ್ಯಾಲಯವನ್ನು ಸೃಷ್ಟಿ ಮಾಡುತ್ತಿದ್ದೇವೆ.

ಶ್ರೀ ಎನ್. ಸಂಪಂಗಿ :– ಒಂದು ವಿಶ್ವವಿದ್ಯಾಲಯ ಮಾಡಲು 50 ವರ್ಷಗಳು ಬೇಕಾಯಿತು. ಇನ್ನು ಮುಂದೆ ಯಾವುದೋ ವಿಶ್ವವಿದ್ಯಾಲಯಗಳು ಬರುತ್ತವೆ ಎನ್ನುವ ಭರವಸೆಗಿಂತ ಇವತ್ತು ನೀವೇನು ಮಾಡಿದ್ದೀರಿ, ಅದನ್ನು ಖಂಡಿತವಾಗಿ ನಮ್ಮಲ್ಲೇ ಮಾಡಬೇಕು. ದಯವಿಟ್ಟು ತಮ್ಮಲ್ಲಿ ಬೇಡಿಕೆ ಇಡುತ್ತಿದ್ದೇವೆ. ಚಿಕ್ಕಬಳ್ಳಾಪುರದಲ್ಲೇ ತಾವು ಇದನ್ನು ಮಾಡಬೇಕು. ಏಕೆಂದರೆ, ಇವತ್ತು ಬಾಗೇಪಲ್ಲಿ ಇರಬಹುದು, ಗೌರಿಬಿದನೂರು ಇರಬಹುದು ಅಥವಾ ಶಿಡ್ಲಘಟ್ಟ ಇರಬಹುದು, ಈ ಪ್ರದೇಶಗಳಿಂದ ಅಲ್ಲಿಗೆ ಬರಬೇಕಾದರೂ 100 ಕಿ.ಮೀ. ಆಗುತ್ತದೆ. ಡಾ: ನಂಜುಂಡಪ್ಪ ವರದಿಯಲ್ಲಿ ಬಹಳ ಹಿಂದುಳಿದ ಪ್ರದೇಶಗಳು ನಮ್ಮಲ್ಲಿವೆ ಎಂದು ಗುರುತಿಸಿದ್ದಾರೆ. ಇವತ್ತು ಆ ಮಕ್ಕಳು ಇಲ್ಲಿನ ವಿಶ್ವವಿದ್ಯಾಲಯಕ್ಕೆ ಬರಬೇಕಾದರೆ ಬಹಳ ತೊಂದರೆಯಾಗುತ್ತದೆ. ಅದಕ್ಕೋಸ್ಕರ ನೀವು ಚಿಕ್ಕಬಳ್ಳಾಪುರದಲ್ಲೇ ಇದನ್ನು ಮಾಡಬೇಕು. ಇದು ಸೂಕ್ತವಾದ ಸ್ಥಳ. ಇದಲ್ಲದೆ ಸರ್ ಎಂ. ವಿಶ್ವೇಶ್ವರಯ್ಯನವರು ಹುಟ್ಟಿದಂತಹ ತಾಲ್ಲೂಕು ಕೂಡ ಇದಾಗಿದೆ. ಇವತ್ತು ನೀವು ಅಲ್ಲಿ ಸೂಕ್ತವಾದಂತಹ ವಿಶ್ವವಿದ್ಯಾಲಯ ಮಾಡಿದರೆ ಅನುಕೂಲವಾಗುತ್ತದೆ. ಈ ಬಗ್ಗೆ ಅಲ್ಲಿಯ ಜಿಲ್ಲಾಧಿಕಾರಿಗಳೊಂದಿಗೆ ನಾವು ಒಮ್ಮೆ ಮಾತನಾಡಿದಾಗ ಅದಕ್ಕೆ ಜಮೀನನ್ನು ಒದಗಿಸಿಕೊಡುತ್ತೇವೆಂದು ಹೇಳಿದ್ದಾರೆ. ಇವತ್ತು ಅದು ಬಹಳ ಮುಖ್ಯವಾದಂತಹ ಕೇಂದ್ರ ಬಿಂದು ಆಗುತ್ತದೆ. ಆದ್ದರಿಂದ, ದಯವಿಟ್ಟು ಚಿಕ್ಕಬಳ್ಳಾಪುರದಲ್ಲೇ ವಿಶ್ವವಿದ್ಯಾಲಯ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು : ಪರ್ಯಾಲೋಚನಾ ಪ್ರಸ್ತಾಪವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

'ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2013ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ [ತಿದ್ದುಪಡಿ] ವಿಧೇಯಕವನ್ನು ಪರ್ಯಾಲೋಚಿಸುವುದು'

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 9ರವರೆಗೆ

ಅಧ್ಯಕ್ಷರು :– '2ರಿಂದ 9ರವರೆಗಿನ ಖಂಡಗಳು ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

2ರಿಂದ 9ರವರೆಗಿನ ಖಂಡಗಳು ವಿಧೇಯಕದ ಅಂಗವಾದವು

(ಖಂಡ 2ರಿಂದ 9ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು

ಖಂಡ 1 ಇತ್ಯಾದಿ

ಅಧ್ಯಕ್ಷರು :– ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕ ಭಾಗವಾಗಿರಬೇಕೆಂಬುದು ಸಭೆಯ ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗವಾದವು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಗಳನ್ನ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿ.ಟಿ.ರವಿ (ಉನ್ನತ ಶಿಕ್ಷಣ ಸಚಿವರು) :– ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2013ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ[ತಿದ್ದುಪಡಿ] ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :– ಪ್ರಸ್ತಾವ ಏನೆಂದರೆ,

'ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2013ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ [ತಿದ್ದುಪಡಿ] ವಿಧೇಯಕವನ್ನು ಅಂಗೀಕರಿಸುವುದು'

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರೆತಿದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕ್ಕೆ ಅನುಮೋದನೆ ನೀಡಲಾಯಿತು)

6. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ :– ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುತ್ತೇನೆ.

i) ಸಿ.ಎಂ.ಆರ್. ವಿಶ್ವವಿದ್ಯಾಲಯ ವಿಧೇಯಕ, 2013 (ಅನುಬಂಧ–8)

ii) ನ್ಯೂ ಬಾಲ್ಡ್‌ವಿನ್ ವಿಶ್ವವಿದ್ಯಾಲಯ ವಿಧೇಯಕ, 2013 (ಅನುಬಂಧ–9)

iii) ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ ವಿಧೇಯಕ, 2013 (ಅನುಬಂಧ–10)

ಅಧ್ಯಕ್ಷರು :– ಮಂಡಿಸಲಾಯಿತು.